ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ದೊಡ್ಡಬಳ್ಳಾಪುರ
ಸಿಸಿ ನಂ 140/17
ಪಿಡಬ್ಲ್ಯೂ: 2 ಸಿಡಬ್ಲೂ: 3

| | |
|---|---|
| ಸಾಕ್ಷಿದಾರನ ಹೆಸರು | **ಶ್ರೀನಿವಾಸ್** |
| **ತಂದೆ** ಹೆಸರು | ರಾಮಯ್ಯ |
| ವಯಸ್ಸು | 39 ವರ್ಷ |
| ಉದ್ಯೋಗ | ಚಾಲಕ |
| ವಾಸ ಸ್ಥಳ | ಕೊನಘಟ್ಟ |
| ದಿನಾಂಕ | 05-10-2021 |

ಮುಂದುರೆದ ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ಚಾಸ-1 ನನಗೆ ಗೊತ್ತಿಲ್ಲ, ಚಾಸ-2 ಗೊತ್ತು, ಚಾಸ-4 ರಿಂದ 7 ರವರು ಗೊತ್ತಿಲ್ಲ, ಮೃತ ಸುನಿಲ್ ಮೊಹಾತೋ ನನಗೆ ಗೊತ್ತಿರುವುದಿಲ್ಲ, ಆರೋಪಿ ನನಗೆ ಗೊತ್ತಿಲ್ಲ,

ದಿನಾಂಕ 09-02-2016 ರಂದು ನಡೆಯಿತೆನ್ನಲಾದ ವಿಚಾರಗಳು ನನಗೆ ಗೊತ್ತಿರುವುದಿಲ್ಲ, ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ, ನನಗೆ ಯಾವುದೇ ವಿಚಾರಗಳು ಗೊತ್ತಿರುವುದಿಲ್ಲ, ಸುನಿಲ್ ಮೊಹಾತೋರವರ ಸಾವಿಗೆ ಏನು ಕಾರಣ ಎಂದು ನನಗೆ ಗೊತ್ತಿರುವುದಿಲ್ಲ, ಆ ದಿನ ಏನಾಯಿತೆಂದು ನನಗೆ ಗೊತ್ತಿರುವುದಿಲ್ಲ, ಸುನಿಲ್ ಮೊಹಾತೋರವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಈ ಪ್ರಕರಣದ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ, ನಾನು ಪೊಲೀಸರ ಮುಂದೆ ಯೂವುದೇ ಹೇಳಿಕೆ ನೀಡಿರುವುದಿಲ್ಲ, ಆರೋಪಿ ಎಂ ಎಸ್ ರಾಮಯ್ಯ ಡೆವಲಪರ್ಸ್‌ನಲ್ಲಿ ಕಟ್ಟಡ ನಿರ್ಮಾಣದ ಕೆಲಸಗಾರರ ಮೇಲ್ವಿಚಾರಣೆ ಸಂಬಂಧ ಸೂಪರ್‌ವೈಸರ್ ಅಗಿ ಕೆಲಸ ನಿರ್ವಹಿಸುತ್ತಿದ್ದರೆಂದರೆ ಸರಿಯಲ್ಲ,

This is a True Copy of the Court Records Online. Authenticated @ districts.ecourtsindia.com/cnr/KABR420002072017/truecopy/order-2.pdf

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಎಪಿಪಿ ಯವರಿಂದಃ**

ದಿನಾಂಕ 09-02-2016 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಗೀತಂ ಯೂನಿವರ್ಸಿಟಿ ಕಾಲೇಜಿನ ಕಟ್ಟಡ ನಿರ್ಮಾಣ ಕೆಲಸ ನಡೆಯುತ್ತಿತ್ತೆಂದರೆ ಸರಿ. ಸದರಿ ಕಟ್ಟಡ ನಿರ್ಮಾಣದ ಕಾಮಗಾರಿ ಸ್ಥಳದಲ್ಲಿ ಕೆಲಸಗಾರರ ಜೀವರಕ್ಷಣೆಗೆ ಯಾವುದೇ ಸುರಕ್ಷಿತ ಕ್ರಮಗಳನ್ನು ಆರೋಪಿ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿರ್ಲಕ್ಷ ವಹಿಸಿದ್ದರಿಂದ ಕಟ್ಟಡ ಕಾಮಗಾರಿ ಲಿಫ್ಟ್ ಯಂತ್ರದ ಬಕೇಟನ್ನು ಬಿಚ್ಚುತ್ತಿದ್ದ ಮೃತ ಸುನಿಲ್ ಮೊಹಾತೋ ಎಂಬುವವರು ಕಟ್ಟಡ ಪಕ್ಕದಲ್ಲಿ ಅಳವಡಿಸಿದ್ದ ಲಿಫ್ಟ್ ಮೇಲಿಂದ ಆಯಾತಪ್ಪಿ ಕಟ್ಟಡದಿಂದ ಬಿದ್ದು ಮೃತ ಪಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿಯ ನಿರ್ಲಕ್ಷತನದಿಂದಲೇ ಸುನಿಲ್ ಮೊಹಾತೋರವರು ಮೃತಪಟ್ಟಿರುತ್ತಾರೆಂದರೆ ಸರಿಯಲ್ಲ.

ಸುನಿಲ್ ಮೊಹಾತೋರವರನ್ನು ನಾನು ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿಯು ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷತೆ ವಹಿಸಿದ್ದರಿಂದ ಸದರಿ ಘಟನೆ ಸಂಭವಿಸಿರುತ್ತದೆಂದರೆ ಸರಿಯಲ್ಲ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ "ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು …………………………………………ತನಿಖೆಗೆ ಸಹಕರಸಿರುತ್ತೇನೆ " ಎಂದು ಪೊಲೀಸರ

This is a True Copy of the Court Records Online. Authenticated @ districts.ecourtsindia.com/cnr/KABR420002072017/truecopy/order-2.pdf

**ಮುಂದೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದ ಮೇರೆಗೆ ಸದರಿ ಹೇಳಿಕೆಯನ್ನು ಉಲ್ಲೇಖಕ್ಕಾಗಿ ನಿಪಿ-2 ಎಂದು ಗುರುತಿಸಲಾಯಿತು.**

ಪಾಟೀ ಸವಾಲು ಏನೂ ಇಲ್ಲ.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ

This is a True Copy of the Court Records Online. Authenticated @ districts.ecourtsindia.com/cnr/KABR420002072017/truecopy/order-2.pdf

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KABR420002072017/truecopy/order-2.pdf

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KABR420002072017/truecopy/order-2.pdf

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABR420002072017/truecopy/order-2.pdf